ಮಾಡಿಸಿಕೊಡಲಾಗುತ್ತದೆ. ಭಗವಂತನ ಆಶೀರ್ವಾದದಿಂದ ಇವತ್ತು ಮಳೆ ಬಂದ ಕಾರಣದಿಂದ ಸಾಕಷ್ಟು ಸೊಳ್ಳೆಗಳು ಕಡಿಮೆಯಾಗಿ ಸಾಕಷ್ಟು ಖಾಯಿಲೆಗಳು ನಿಯಂತ್ರಣ ಆಗಿರುವಂಥ ಸನ್ನಿವೇಶವನ್ನು ಇವತ್ತು ನಾವು ಕಾಣುತ್ತಿದ್ದೇವೆ. ತಾವು ಸೊಳ್ಳೆಗಳ ನಿಯಂತ್ರಣದ ಬಗ್ಗೆ ಏನೇನು ಸಲಹೆಗಳನ್ನು ಕೊಟ್ಟಿರುತ್ತೀರಿ ಅದರ ಸ್ವಚ್ಚತೆಯನ್ನು ಕಾಪಾಡುವುದರ ಬಗ್ಗೆ, ಸ್ತ್ರೀಶಕ್ತಿ ಮತ್ತು ಸ್ವಸಹಾಯ ಗುಂಪುಗಳ ಬಗ್ಗೆ, ನಗರ ಪಾಲಿಕೆಗೆ ಮತ್ತು ನಗರ ಸಭೆಗಳಿಗೆ, ಗ್ರಾಮ ಪಂಚಾಯಿತಿಗಳಿಗೆ ಒಂದು ಸ್ವಚ್ಚತೆಯನ್ನು ಕಾಪಾಡುವುದರ ಸಲುವಾಗಿ ಏನು ಮಾಡಬೇಕು ಅದನ್ನು ನೋಡಿಕೊಂಡು ಆದಷ್ಟು ಮುಂಜಾಗ್ರತೆಯ ಕ್ರಮವನ್ನು ನಾವು ತೆಗೆದುಕೊಂಡು ಮಾಡುತ್ತೇವೆ.

ವಿಷಯ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಬಿಡುಗಡೆಯಾದ ಅನುದಾನದ ಬಗ್ಗೆ

15(117)ಶ್ರೀ ತಿಪ್ಪೇಸ್ವಾಮಿ(ಚಳ್ಳಕೆರೆ)
ಶ್ರೀ ಡಿ.ಸುಧಾಕರ, (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ 2008–09ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿಗೆಂದು ಬಿಡುಗಡೆಯಾದ ಅನುದಾನವೆಷ್ಟು; ವಿವಿಧ ಯೋಜನೆಗಳಡಿ ಬಿಡುಗಡೆಗೊಳಿಸಿದ ಅನುದಾನದ ಪೂರ್ಣ ವಿವರ ನೀಡುವುದು;

2008–09ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತಿದೆ.

(ಲಕ್ಷ ರೂ.ಗಳು)

ಕ್ರ.ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ
1	ವಿಶೇಷ ಕೇಂದ್ರೀಯ ಸಹಾಯಧನ	122.766
2	ಭಾರತ ಸಂವಿಧಾನ ಅನುಚ್ಛೇದ 275(1)ರ ಅನುದಾನ	124.80
3	ಗಿರಿಜನ ಉಪಯೋಜನೆಯಡಿ ಕ್ರೋಢೀಕರಿಸಿದ ಅನುದಾನ	252.50
	ಒಟ್ಟು	**500.066**

ಆ ಬಿಡುಗಡೆಯಾದ ಅನುದಾನದಲ್ಲಿ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಹಂಚಿಕೆ ಮಾಡಲಾದ ಹಣದ ವಿವರಗಳನ್ನು ನೀಡುವುದು;

ತಾಲ್ಲೂಕುವಾರು ಹಂಚಿಕೆ ಮಾಡಲಾದ ಹಣದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಇ ಈ ಅನುದಾನದ ಬಿಡುಗಡೆಯಲ್ಲಿ ತಾರತಮ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

–ಬಂದಿಲ್ಲ–

ಈ ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

–ಉದ್ಭವಿಸುವುದಿಲ್ಲ–

ಅನುಬಂಧ

2008–09ನೇ ಸಾಲಿನಲ್ಲಿ ಪರಿಶಿಷ್ಟ ವರ್ಗದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆಯಾದ ಅನುದಾನದ ತಾಲ್ಲೂಕುವಾರು ವಿವರ

(ಲಕ್ಷ ರೂ.ಗಳು)

ಕ್ರ ಸಂ	ತಾಲ್ಲೂಕು	ವಿಶೇಷ ಕೇಂದ್ರೀಯ ಸಹಾಯಧನ	ಭಾರತ ಸಂವಿಧಾನ ಅನುಚ್ಛೇಧ 275(1)ರ ಅನುದಾನ	ಗಿರಿಜನ ಉಪ ಯೋಜನೆ ಯಡಿ ಕ್ರೋಢೀಕರಿಸಿದ ಅನುದಾನ	ತುಂತುರು ನೀರಾವರಿ ಘಟಕ	ಒಟ್ಟು
1	ಚಳ್ಳಕೆರೆ	11.00	16.00	4.00	2.63	33.63
2	ಹೊಳಲ್ಕೆರೆ	12.00	17.00	5.00	2.33	36.33
3	ಹೊಸದುರ್ಗ	5.25	0.00	5.00	2.33	12.58
4	ಹಿರಿಯೂರು	43.00	56.00	224.50	3.10	326.60
5	ಮೊಳಕಾಲ್ಮೂರು	11.50	6.80	9.00	2.79	30.09
6	ಚಿತ್ರದುರ್ಗ	24.50	29.00	5.00	2.336	60.836
	ಒಟ್ಟು	**122.766**	**124.80**	**252.50**	**15.506**	**500.066**

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಎಸ್‌ಟಿ ಜನಾಂಗಕ್ಕೆ ಬಂದಂಥ ಹಣ ನಮ್ಮ ಚಿತ್ರದುರ್ಗ ಜಿಲ್ಲೆಗೆ 484.30 ಲಕ್ಷ ರೂ.ಗಳು ಬಂದಿದೆ. ಚಿತ್ರದುರ್ಗ ಜಿಲ್ಲೆಗೆ ಬಂದಿರತಕ್ಕಂಥ ಹಣ 484 ಲಕ್ಷ ರೂ.ಗಳು. ಇದರಲ್ಲಿ ಸನ್ಮಾನ್ಯ ಮಂತ್ರಿಗಳು ಸಾಮಾನ್ಯ ಕ್ಷೇತ್ರದಿಂದ ಗೆದ್ದಿದ್ದಾರೆ. ಎಸ್‌ಟಿ ಕ್ಷೇತ್ರದಿಂದ ನಾನು ಗೆದ್ದಿದ್ದೇನೆ. ನನ್ನ ಕ್ಷೇತ್ರಕ್ಕೆ 25 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಮಂತ್ರಿಗಳು ತಮ್ಮ ಕ್ಷೇತ್ರಕ್ಕೆ 324 ಲಕ್ಷ ರೂ.ಗಳನ್ನು ಇಟ್ಟುಕೊಂಡಿದ್ದಾರೆ. ಇದು ಎಸ್‌ಟಿ ಫಂಡ್, ಮಂತ್ರಿಗಳ ಕ್ಷೇತ್ರಕ್ಕೆ 324 ಲಕ್ಷ ರೂ.ಗಳು. ಅದು ಜನರಲ್ ಕ್ಷೇತ್ರ, ನನ್ನ ಕ್ಷೇತ್ರಕ್ಕೆ ಕೇವಲ 25 ಲಕ್ಷ ರೂ.ಗಳು, ಇದು ನ್ಯಾಯವೆ? ಇವತ್ತು ತಮ್ಮ ಮುಖೇನ ಸನ್ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ನನಗೆ ನ್ಯಾಯ ದೊರಕಿಸಿ ಕೊಡಬೇಕು.

ಶ್ರೀ ಡಿ.ಕೆ.ಶಿವಕುಮಾರ್: ಏನು ಸ್ವಾಮಿ ಇದು ರಾಜಕಾರಣ. ಏನು ಭಿನ್ನಮತ, ಏನು ಭಿನ್ನಾಭಿಪ್ರಾಯ, ಏನು ಆರೋಪ.

ಅಧ್ಯಕ್ಷರು: ದಯವಿಟ್ಟು ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಲಿ. ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲರೆ, ತಾವು ಕುಳಿತುಕೊಳ್ಳಿ. ಮಾನ್ಯ ಕೃಷ್ಣಮೂರ್ತಿಯವರೆ, ಅವರು ಉತ್ತರವನ್ನು ಕೊಡಲಿ. ಮಾನ್ಯ ಎನ್.ವೈ.ಗೋಪಾಲಕೃಷ್ಣರವರು ಅದೇ ಜಿಲ್ಲೆಯವರು ಇರುವುದರಿಂದ ಅವರು ಪ್ರಶ್ನೆಯನ್ನು ಕೇಳುತ್ತಾರೆ ಉತ್ತರವನ್ನು ಹೇಳಿ.

ಶ್ರೀ ಎನ್.ವೈ.ಗೋಪಾಲಕೃಷ್ಣ: ನನ್ನ ಮೊಳಕಾಲ್ಮೂರು ಕ್ಷೇತ್ರವು ಎಸ್‌ಟಿ ರಿಸರ್ವೇಶನ್ ಕ್ಷೇತ್ರ ಆಗಿರುವಂಥದ್ದು. ಮಾನ್ಯ ಮಂತ್ರಿಗಳು ಸೆಂಟ್ರಲ್ ಅಸಿಸ್ಟನ್ಸೆನಿಂದ ಕೊಟ್ಟಿರುವುದು 172 ಲಕ್ಷ ರೂ.ಗಳು. ಇದರಲ್ಲಿ ಚೆಳ್ಳಕೆರೆಗೆ 11 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಮೊಳಕಾಲ್ಮೂರಿಗೆ 6.70 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. Grants under Article 275 of the Constitution of India ಅಡಿಯಲ್ಲಿ 124 ಲಕ್ಷ ರೂ.ಗಳು ಬಂದಿರತಕ್ಕಂಥದ್ದರಲ್ಲಿ ಚೆಳ್ಳಕೆರೆಗೆ 12 ಲಕ್ಷ ರೂ.ಗಳು, ಮೊಳಕಾಲ್ಮೂರಿಗೆ 11 ಲಕ್ಷ ರೂ.ಗಳು. ನಂತರ Grants under tribal supply ಇದರಡಿಯಲ್ಲಿ ಬಂದಿರುವ ರೂ.252 ಲಕ್ಷ ರೂ.ಗಳಲ್ಲಿ 224 ಲಕ್ಷ ರೂ.ಗಳನ್ನು ಹಿರಿಯೂರಿಗೆ ತೆಗೆದುಕೊಂಡಿದ್ದಾರೆ, ಮೊಳಕಾಲ್ಮೂರಿಗೆ 9 ಲಕ್ಷ ರೂ.ಗಳು, ಚೆಳ್ಳಕೆರೆಗೆ 4 ಲಕ್ಷ ರೂ.ಗಳು. ಇದರಲ್ಲಿ ಒಟ್ಟು 500 ಲಕ್ಷ ರೂ.ಗಳು ಬಂದಿರತಕ್ಕಂಥದ್ದು. ಇದರಲ್ಲಿ ಹಿರಿಯೂರಿಗೆ 326 ಲಕ್ಷ ರೂ.ಗಳನ್ನು ತೆಗೆದುಕೊಂಡಿರತಕ್ಕಂಥದ್ದು, ಮೊಳಕಾಲ್ಮೂರಿಗೆ 30 ಲಕ್ಷ ರೂ.ಗಳು, ಚೆಳ್ಳಕೆರೆಗೆ 33 ಲಕ್ಷ ರೂ.ಗಳು, ಇವರೆಡೂ ಎಸ್.ಟಿ. ಮೀಸಲಾತಿ ಕ್ಷೇತ್ರಗಳು. ದಯವಿಟ್ಟು ಇದರ ಬಗ್ಗೆ ತಮ್ಮ ಮೂಲಕ ಉತ್ತರವನ್ನು ಕೊಡಿಸಬೇಕು.

ಶ್ರೀ ಡಿ.ಸುಧಾಕರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಕೇಳಿದ ಹಾಗೆ, ಕೇಂದ್ರದ ವಿಶೇಷ ಅಡಿಯಲ್ಲಿ ಅವರ ಕ್ಷೇತ್ರಕ್ಕೆ 2006–07 ರಲ್ಲಿ 12 ಲಕ್ಷ ರೂ.ಗಳು ಬಂದಿತ್ತು.

ಅಧ್ಯಕ್ಷರು: ಮಾನ್ಯ ಸಚಿವರೆ, ಸಂಖ್ಯೆಯನ್ನು ರಿಪೀಟ್ ಮಾಡುವುದು ಬೇಕಾಗಿರುವುದಿಲ್ಲ. ಎಸ್‌ಟಿ ಕ್ಷೇತ್ರ ಇರುವಲ್ಲಿ ಕಡಿಮೆಯಾಗಿದೆ, ನಿಮ್ಮ ಕ್ಷೇತ್ರವಾದ ಹಿರಿಯೂರಿಗೆ ಜಾಸ್ತಿಯಾಗಿದೆ ಎನ್ನುವಂಥ ಪ್ರಶ್ನೆ ಇದೆ, ಅದಕ್ಕೊಂದು ಉತ್ತರವನ್ನು ಕೊಟ್ಟು ಬಿಡಿ.

ಶ್ರೀ ಡಿ.ಸುಧಾಕರ್: ಸರ್ ಈ ವರ್ಷ ಹಿರಿಯೂರಿಗೆ ಒಂದು ವಿಶೇಷವಾದ ಪ್ಯಾಕೇಜ್‌ನ್ನು ಮಾಡಿದ್ದೇವೆ. ಪೂಲ್ಡ್ ಅಮೌಂಟ್‌ನಲ್ಲಿ ಬೇರೆ ಕ್ಷೇತ್ರಗಳಿಗೆ ಯಾವುದೇ ರೀತಿಯಾಗಿ ತೊಂದರೆಯಾಗದ ರೀತಿಯಲ್ಲಿ ನಮ್ಮಲ್ಲಿ ಉಳಿದಿರುವಂಥ ಸೇವಿಂಗ್ಸ್‌ನಲ್ಲಿ ಈ ಕಾರ್ಯಕ್ರಮವನ್ನು ಮಾಡಿದ್ದೇವೆ. Regular scheme ಗಳು ಏನಿದ್ದವು, ಅವುಗಳಿಗೆ ನಾವು ಏನು ಕಡಿಮೆ ಮಾಡಿಲ್ಲ. ಉಳಿದಿರತಕ್ಕಂಥ ಪೂಲ್ಡ್ ಅಮೌಂಟ್‌ನಲ್ಲಿ ಮಹಿಳೆಯರಿಗೆ ಒಂದು ಪ್ಯಾಕೇಜ್ ಮಾಡಿದ್ದೇವೆ. ಮುಂದಿನ

ದಿವಸಗಳಲ್ಲಿ ಇವರಿಗೂ ಸಹ ಸರ್ಕಾರ ಹಣದ ಲಭ್ಯತೆಯ ಮೇಲೆ ಸಹಕಾರವನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ ಎನ್ನುವಂಥ ಮಾತನ್ನು ತಮ್ಮ ಮೂಲಕ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ನಾನು ನಮ್ಮ ಜಿಲ್ಲೆಯಲ್ಲಿರತಕ್ಕಂಥದ್ದಕ್ಕೆ ಒಂದು allotment ಕಳುಹಿಸಿದ್ದಾರೆ. ಜಿಲ್ಲಾ ಪಂಚಾಯತಿಗೆ 118 ಲಕ್ಷ ರೂ.ಗಳನ್ನು ಕಳುಹಿಸಿದ್ದಾರೆ. ಜಿಲ್ಲಾಧಿಕಾರಿಗಳಿಗೆ 134.50 ಲಕ್ಷ ರೂಪಾಯಿಗಳನ್ನು ಕಳುಹಿಸಿದ್ದಾರೆ. ನಮ್ಮ ತಾಲ್ಲೂಕಿಗೆ ಬಂದಾಗ ನಾನು ಅವರನ್ನು ಕೇಳಿದೆ. ನೀವು ಇಷ್ಟೊಂದು ಬಂದಿರುವ ಹಣವನ್ನು ನಮಗೆ ಏಕೆ ತಾರತಮ್ಯ ಮಾಡಿದ್ದೀರಿ ಎಂದು ಅಧಿಕಾರಿಗಳನ್ನು ಕೇಳಿದರೆ, ಮಾನ್ಯ ಮಿನಿಸ್ಟರ್‌ರವರು ಡೈರೆಕ್ಷನ್ ಕೊಟ್ಟಿದ್ದಾರೆ, ಇಲ್ಲಿ ನಾವು ಚೇಂಜ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ನಾನು ಅವರ ಡಿಪಾರ್ಟ್‌ಮೆಂಟಿನಿಂದ ಮಾಹಿತಿಯನ್ನು ತರಿಸಿದ್ದೇನೆ. ದಿನಾಂಕ:5.1.2009 ರಂದು ಚಿತ್ರದುರ್ಗಕ್ಕೆ 107 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗದಗಕ್ಕೆ 13 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕುವಾರು ನಾನು ಮಾಹಿತಿಯನ್ನು ತರಿಸಿರುತ್ತೇನೆ. ಇವರು ಒಬ್ಬರು ಮಾತ್ರ 324 ಲಕ್ಷ ರೂ.ಗಳನ್ನು ತೆಗೆದುಕೊಂಡಿದ್ದಾರೆ. ಇದರಿಂದ ನಮಗೆಲ್ಲಾ ಅನ್ಯಾಯವಾಗಿದೆ, ಇದನ್ನು ತಾವು ಸರಿ ಮಾಡಿಕೊಡಬೇಕು. ಇವರದ್ದು ಸಾಮಾನ್ಯ ಕ್ಷೇತ್ರವಾಗಿರುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ಸ್ವಾಮಿ, ಇದನ್ನು ಸುಧಾಕರ್‌ವರು ಒಬ್ಬರೆ ಮಾಡಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಬೇಕಾದರೆ ತೆಗೆದು ನೋಡಿ, ಅವರು ಕೂಡ ಇದೇ ಕೆಲಸವನ್ನು ಮಾಡಿದ್ದಾರೆ.

ಶ್ರೀ ತಿಪ್ಪೇಸ್ವಾಮಿ: ತಾರತಮ್ಯವಾಗಿರುವುದರಿಂದ ಎಲ್ಲರಿಗೂ ಸಮಾನವಾಗಿ ಹಂಚುವಂತೆ ಆಗಬೇಕು.

ಅಧ್ಯಕ್ಷರು: ಇದನ್ನು ಸರಿ ಮಾಡುತ್ತೇವೆ ಎನ್ನುವುದನ್ನು ಹೇಳಿ.

ಶ್ರೀ ಡಿ.ಸುಧಾಕರ್: ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಹಿರಿಯೂರಿಗೆ ಒಂದು special ಕಾರ್ಯಕ್ರಮ ಮಾಡಿರುವುದರಿಂದ ಇದನ್ನು ಮುಂದಿನ ದಿನಗಳಲ್ಲಿ ಸರಿಪಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ರೀತಿ ಎಲ್ಲಾ ಸಚಿವರು ತಮ್ಮ ತಮ್ಮ ಕ್ಷೇತ್ರಕ್ಕೆ special ಕಾರ್ಯಕ್ರಮ ಕೊಟ್ಟುಕೊಂಡು ಹೋದರೆ, ಮಾನ್ಯ ನಂಜುಂಡಪ್ಪನವರ ವರದಿ ಏನಿದೆ, ಆ ಹಿಂದುಳಿದ ತಾಲ್ಲೂಕುಗಳನ್ನು ಯಾರು ನೋಡುತ್ತಾರೆ.

ಅಧ್ಯಕ್ಷರು: ಸರಿ ಮಾಡುತ್ತೇನೆ ಎನ್ನುವುದನ್ನು ಹೇಳಿ.

ಶ್ರೀ ಡಿ.ಸುಧಾಕರ್: ಮುಂದಿನ ದಿನಗಳಲ್ಲಿ ಅದನ್ನು ಪರಿಶೀಲನೆ ಮಾಡಿ ಸರಿ ಮಾಡುತ್ತೇನೆ.

ಶ್ರೀ ತಿಪ್ಪೇಸ್ವಾಮಿ: ಮಾನ್ಯ ಅಧ್ಯಕ್ಷರೆ, ಇದೇ ಫಂಡ್‌ನಲ್ಲಿ ತೆಗೆದು ಹಾಕಿ ಸರಿ ಮಾಡಿಕೊಡಬೇಕು.

ಅಧ್ಯಕ್ಷರು: ಕಾರ್ಯಕ್ರಮಗಳನ್ನು ಸರಿ ಮಾಡಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪೂರ್: ಇದು ಕೇಂದ್ರ ಸರ್ಕಾರದ ಹಣ, ಪೂರ್ಣ ಅಮೌಂಟ್ ಅಲ್ಲ. ಬೇಕಾದರೆ ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡಿ ಸಚಿವರು ಹೇಳಲಿ.

ಅಧ್ಯಕ್ಷರು: ಕಾರ್ಯಕ್ರಮವನ್ನು ಸರಿ ಮಾಡಿ. ಈಗ ಪ್ರಶ್ನೋತ್ತರ ಸಮಯ ಮುಗಿದಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು:

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ದಿನಾಂಕ: 09.07.2009 ರಂದು 01ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 34 ಪ್ರಶ್ನೆಗಳ ಪೈಕಿ 31 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅಧ್ಯಕ್ಷರು: ಈಗ ಪ್ರಶ್ನೋತ್ತರ ಮುಕ್ತಾಯವಾಗಿದೆ. ಈಗ 7.30 ಗಂಟೆಯಾಗಿದೆ. ಬಾಕಿ ವಿಷಯವನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ: ಶೂನ್ಯವೇಳೆ ತೆಗೆದುಕೊಳ್ಳಿ.

ಶ್ರೀ ತಿಪ್ಪೇಸ್ವಾಮಿ: ಸ್ವಾಮಿ ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು: ಮಾನ್ಯ ಮಂತ್ರಿಗಳೆ, ಅದನ್ನು ಸರಿಮಾಡುತ್ತೇವೆಂದು ಹೇಳಿ. ತಾರತಮ್ಯವು ಆಗದಂತೆ ನೋಡಿಕೊಳ್ಳುತ್ತೇನೆಂದು ಹೇಳಿ. ಮಾನ್ಯ ರೇವಣ್ಣನವರೆ, ಈಗ ಶೂನ್ಯವೇಳೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ತಾವು ಮಾತನಾಡಿ.

5. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು

ಅ) ವಿಷಯ: ಗುಲ್ಬರ್ಗ ಹಾಲು ಉತ್ಪಾದಕರ ಸಂಘಕ್ಕೆ ನಿರ್ದೇಶಕರ ನಾಮಕರಣದ ಬಗ್ಗೆ

ಶ್ರೀ ಹೆಚ್.ಡಿ.ರೇವಣ್ಣ(ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಮಾನ್ಯ ಗೋಪಾಲಕೃಷ್ಣರವರೆ ಒಂದು ನಿಮಿಷ ಕುಳಿತುಕೊಳ್ಳಿ.

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ದಯಮಾಡಿ ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ,...

ಅಧ್ಯಕ್ಷರು: ಈಗ ಪ್ರಶ್ನೋತ್ತರವನ್ನು ಕ್ಲೋಸ್ ಮಾಡಿದ್ದೇನೆ. ದಯಮಾಡಿ ತಾವುಗಳು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಮಂತ್ರಿಗಳೇ ಹೊರಟು ಹೋದರು.